ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ, ನಾಡಕಛೇರಿ ಕೊಟ್ಟೂರು

ಸಂ/ಕಂ/ಹ.ಬ./ನಾಕಕೊ/99/2016-17. ದಿನಾಂಕ:04-10-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಹನುಮಕ್ಕ ಗಂಡ ಮರಬದ ಓಬಪ್ಪ<br>2)ಎಂ.ಗಂಗಮ್ಮ ಗಂಡ ಎಂ.ರಾಮಪ್ಪ<br>3)ಕರಿಯಮ್ಮ ತಂದೆ ಮರಬದ ಓಬಪ್ಪ<br>4)ಎಂ.ನಾಗರಾಜ ತಂದೆ ಮರಬದ ಓಬಪ್ಪ<br>5)ನಾಗರತ್ನಮ್ಮ ಗಂಡ ಮರಬದ ಓಬಪ್ಪ<br>ಬಡೇಲಡುಕು ಗ್ರಾಮ<br>ಕೂಡ್ಲಿಗಿ ತಾಲೂಕು | 1)ಎಂ.ರಂಗಪ್ಪ ತಂದೆ ಲೇಟ್ ಓಬಪ್ಪ<br>2)ಶಿವಗಂಗಮ್ಮ ಗಂಡ ಲೇಟ್ ರಾಮಪ್ಪ<br>3)ಈರಣ್ಣ ತಂದೆ ಲೇಟ್ ಓಬಪ್ಪ<br>4)ಕೃಷ್ಣಪ್ಪ ತಂದೆ ಲೇಟ್ ಓಬಪ್ಪ<br>ಬಡೇಲಡುಕು ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಗಜಾಪುರ ಗ್ರಾಮದ ಸನಂ 259/4. ವಿಸ್ತೀರ್ಣ 8-04. ಎಕ್ರೆ ಜಮೀನನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಗಜಾಪುರ ಗ್ರಾಮದ ಸನಂ 259/4. ವಿಸ್ತೀರ್ಣ 8-04. ಎಕ್ರೆ ಜಮೀನನ್ನು ಸದರಿ ತಾಲೂಕು ಬಡೇಲಡುಕು ಗ್ರಾಮದ ಈರಣ್ಣ ತಂದೆ ಲೇಟ್ ಮರಬದ ಓಬಪ್ಪ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಗಜಾಪುರ ಇವರು ನಮೂನೆ-21 ನೋಟಿಸನ್ನು ದಿನಾಂಕ 08-01-2016. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ತಾಲೂಕು ಬಡೇಲಡುಕು ಗ್ರಾಮದ ರಂಗಪ್ಪ ತಂದೆ ಲೇಟ್ ಓಬಪ್ಪ ಶಿವಗಂಗಮ್ಮ ಗಂಡ ಲೇಟ್ ರಾಮಪ್ಪ ಕೃಷ್ಣಪ್ಪ ತಂದೆ ಲೇಟ್ ಓಬಪ್ಪ ಇವರುಗಳು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 23/2015-16. ದಿನಾಂಕ 09-02-2016. ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 12-04-2016 ರಿಂದ 04-10-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಗೈರು ಹಾಜರಾಗಿರುತ್ತಾರೆ. ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಗಜಾಪುರ ಗ್ರಾಮದ ಸನಂ 259/4. ವಿಸ್ತೀರ್ಣ 8-04. ಎಕ್ರೆ ಜಮೀನು ನಮ್ಮ ತಂದೆಯವರಾದ ಮರಬದ ಓಬಪ್ಪ ಇವರ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತದೆ. ಇವರು ದಿನಾಂಕ 07-04-1990 ರಂದು ಹಾಗೂ ನಮ್ಮ ತಾಯಿಯವರಾದ ಗಂಗಮ್ಮ ಗಂಡ ಎಂ.ಓಬಪ್ಪ ಇವರು ದಿನಾಂಕ 10-05-1990 ರಂದು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಪ್ರಕಾರ ನಮ್ಮಗಳ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿ ಅರ್ಜಿ ಮಾತ್ರ ಸಲ್ಲಿಸಿದ್ದು ವಿಚಾರಣೆಗೆ ಗೈರು ಹಾಜರಾಗಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಸದರಿ ವಿವಾದಿತ ಜಮೀನನ್ನು ನಾವುಗಳು ಪಾಲು ವಿಭಾಗದ ಪತ್ರ ಪ್ರಕಾರ ಹಂಚಿಕೊಳ್ಳುವವರಿದ್ದೇವೆ. ಇನ್ನು ಇಲ್ಲಿಯವರೆಗೂ ಹಂಚಿಕೆಯಾಗಿರುವುದಿಲ್ಲ ಕಾರಣ ಸದರಿ ಜಮೀನನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ನಮ್ಮ ತಕರಾರು ಇರುವುದಾಗಿ ಕೋರಿರುತ್ತಾರೆ.

ಪು.ತಿ.ನೋ-2.

ದಿನಾಂಕ 04-10-2016 ರ ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಜಂಟಿಯಾಗಿ ಅರ್ಜಿದಾರರ ಕೋರಿಕೆಯನ್ವಯ ಪೋತಿವಿರಾಸತ್ ಪ್ರಕಾರ ಹಕ್ಕು ಬದಲಾವಣೆಗೆ ಒಪ್ಪಿಗೆ ಇರುವುದೆಂದು ತಿಳಿಸಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ತಕರಾರುದಾರರು ಜಂಟಿಯಾಗಿ ಅರ್ಜಿದಾರರ ಕೋರಿಕೆಯನ್ವಯ ಪೋತಿವಿರಾಸತ್ ಪ್ರಕಾರ ಹಕ್ಕು ಬದಲಾವಣೆಗೆ ಒಪ್ಪಿಗೆ ಇರುವುದರಿಂದ ಅದರನ್ವಯ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**-:ಆದೇಶ:-**

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಗಜಾಪುರ ಗ್ರಾಮದ ಸನಂ 259/4. ವಿಸ್ತೀರ್ಣ 8-04. ಎಕ್ರೆ ಜಮೀನನ್ನು ಪೋತಿವಾರಸು ಹಕ್ಕಿನ ಪ್ರಕಾರ ಅರ್ಜಿದಾರರಾದ ಹನುಮಕ್ಕ ತಂದೆ ಲೇಟ್ ಮರಬದ ಓಬಪ್ಪ, ಎಂ.ಗಂಗಮ್ಮ ಗಂಡ ಲೇಟ್ ಎಂ.ರಾಮಪ್ಪ, ಎಂ.ರಂಗಪ್ಪ ತಂದೆ ಲೇಟ್ ಮರಬದ ಓಬಪ್ಪ, ಕರಿಯಮ್ಮ ತಂದೆ ಲೇಟ್ ಮರಬದ ಓಬಪ್ಪ, ಎಂ.ನಾಗರಾಜ ತಂದೆ ಲೇಟ್ ಮರಬದ ಓಬಪ್ಪ, ನಾಗರತ್ನಮ್ಮ ತಂದೆ ಲೇಟ್ ಮರಬದ ಓಬಪ್ಪ, ಎಂ.ಈರಣ್ಣ ತಂದೆ ಲೇಟ್ ಮರಬದ ಓಬಪ್ಪ, ಎಂ.ಕೃಷ್ಣಪ್ಪ ತಂದೆ ಲೇಟ್ ಮರಬದ ಓಬಪ್ಪ. ಬಡೇಲಡುಕು ಗ್ರಾಮ ಇವರುಗಳ ಹೆಸರುಗಳಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 04-10-2016. ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಕೊಟ್ಟೂರು

ಇದರ ಪ್ರತಿಯನ್ನು:

1) ಅರ್ಜಿದಾರರಾದ ಹನುಮಕ್ಕ ತಂದೆ ಮರಬದ ಓಬಪ್ಪ ಹಾಗೂ ಇತರರು ಬಡೇಲಡುಕು ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಎಂ.ರಂಗಪ್ಪ ತಂದೆ ಲೇಟ್ ಮರಬದ ಓಬಪ್ಪ, ಹಾಗೂ ಇತರರು ಬಡೇಲಡುಕು ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.